(ಉ) ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಹೈಕೋರ್ಟ್ ಸ್ಥಾಪನೆಗೆ ಒತ್ತಾಯ

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯ ಸಲುವಾಗಿ ಅಲ್ಲಿಯ ನ್ಯಾಯವಾದಿಗಳಾದ ಬಿ.ಡಿ. ಹೀರೆಮಠ್, ಶ್ರೀಮತಿ ಮೀನಾಕ್ಷಿ ಕುಲಕರ್ಣಿಯವರು ಕಳೆದ ಎಂಟು ದಿವಸಗಳಿಂದ ಆಮರಣ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಎರಡೂವರೆ ವರ್ಷಗಳ ಹಿಂದೆ ಅಲ್ಲಿನ ವಕೀಲರು ಮತ್ತು ನಾಗರೀಕರು ಸತ್ಯಾಗ್ರಹ ಮಾಡಿದ್ದರು. ಆಗಲೂ ಆಶ್ವಾಸನೆ ಕೊಟ್ಟು ಆ ವಿಷಯ ಪೆಂಡಿಂಗ್ ಉಳಿಯಿತು. ಆದರೆ ಮತ್ತೆ ಈಗ ಎಂಟು ದಿವಸಗಳಿಂದ ಮತ್ತೆ ಆಮರಣಾಂತ ಉಪವಾಸ ಮಾಡುತ್ತಿದ್ದಾರೆ. ಇವತ್ತು ಬಹಳ ಚಿಂತಾಜನಕ ಸ್ಥಿತಿಯಲ್ಲಿ ಅವರು ಇದ್ದಾರೆ. ಇವತ್ತು ಹುಬ್ಬಳ್ಳಿ - ಧಾರವಾಡ ಸಂಪೂರ್ಣ ಬಂದ್ ಆಚರಣೆ ಮಾಡಿದ್ದಾರೆ. ನಾನು ನ್ಯೂಸ್‌ನಲ್ಲಿ ನೋಡಿದ್ದೇನೆ ಅಲ್ಲಿನ ರಿಪೋರ್ಟ್ಸ್ ತೆಗೆದುಕೊಂಡಿದ್ದೇನೆ ಅದಕ್ಕೆ ಸಂಪೂರ್ಣವಾದ ಬೆಂಬಲವನ್ನು ಕೊಟ್ಟು ಬಂದ್‌ನ್ನು ಹುಬ್ಬಳ್ಳಿ-ಧಾರವಾಡದಲ್ಲಿ ಆಚರಣೆ ಮಾಡುತ್ತಿದ್ದಾರೆ. ಇದೊಂದು ಬಹಳ ಗಂಭೀರವಾದಂತಹ ವಿಷಯ. ಕಳೆದ 20-30 ವರ್ಷಗಳಿಂದ ಅಲ್ಲಿಯ ಜನತೆ ಈವೊಂದು ಬೇಡಿಕೆಯನ್ನು ಇಟ್ಟುಕೊಂಡು ಹೋರಾಟ ಮಾಡಿಕೊಂಡು ಬಂದಿದ್ದಾರೆ. ಆದರೆ ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಪರಿಶೀಲನೆ ಮಾಡುತ್ತಿಲ್ಲವೆಂದು ನನ್ನ ಅನಿಸಿಕೆ. ಏಕೆಂದರೆ ಕೇವಲ ಒಂದು ಹೈಕೋರ್ಟ್ ಪೀಠದ ಸಲುವಾಗಿ ಹೈಕೋರ್ಟ್‌ನ ಒಪ್ಪಿಗೆ ಬೇಕು. ಆದರೆ ಆ ಹೈಕೋರ್ಟ್‌ನ ಒಪ್ಪಿಗೆಯನ್ನು ಪಡೆದುಕೊಳ್ಳಲಿಕ್ಕೆ ನಮ್ಮ ರಾಜ್ಯಸರ್ಕಾರ ಗಂಭೀರವಾದ ರೀತಿಯಲ್ಲಿ ಒಂದು ಪ್ರಯತ್ನವನ್ನು ಮಾಡಿ ರಾಜಕೀಯ ಒತ್ತಡವನ್ನು ನಮ್ಮ ಹೈಕೋರ್ಟ್ ಮೇಲೆ ತಂದಾಗ ಮಾತ್ರ ಅಲ್ಲಿನ ಒಪ್ಪಿಗೆಯನ್ನು ಪಡೆಯಲಿಕ್ಕೆ ಸಾಧ್ಯವಿದೆ. ಕೇವಲ ನಾವು ಪತ್ರ ವ್ಯವಹಾರವನ್ನು ಮಾಡಿ ಅವರಿಂದ ಒಪ್ಪಿಗೆ ತೆಗೆದುಕೊಳ್ಳುತ್ತೇವೆಂದರೆ ಅದು ಆಗುವುದಿಲ್ಲ. ದಯವಿಟ್ಟು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಜೊತೆ ನಮ್ಮ ಮುಖ್ಯಮಂತ್ರಿಗಳು ನಮ್ಮ ಕಾನೂನು ಸಚಿವರು ಅವರನ್ನು ಭೇಟಿಯಾಗಿ ಅವರ ಮನವೊಲಿಸಿ ಅಲ್ಲಿನ ನಾಗರೀಕರ ಬೇಡಿಕೆ ಏನಿದೆ ಅದನ್ನು ಅವರಿಗೆ ಕನ್ವಿನ್ಸ್ ಮಾಡಿ ಇದನ್ನು ಒಪ್ಪಿಸುವಂತಹ ಕೆಲಸವನ್ನು ಅವರು ಮಾಡಿದರೆ, ಹಾಗೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದರೆ, ಕೇಂದ್ರ ಸರ್ಕಾರ ಅದಕ್ಕೆ ಅಸ್ತು ಎನ್ನಬಹುದು. ಇವತ್ತು ಮಧ್ಯಪ್ರದೇಶ, ಮಹಾರಾಷ್ಟ್ರ, ಉತ್ತರ ಪ್ರದೇಶಗಳಲ್ಲಿ ಹೈಕೋರ್ಟ್ ಬೆಂಚುಗಳು ಇವೆ. ಮೊನ್ನೆ ಮೊನ್ನೆ ಸಹ ಮಧುರೆಯಲ್ಲಿ ಬೆಂಚ್ ಮಾಡಲಿಕ್ಕೆ ತಮಿಳುನಾಡು ಹೈಕೋರ್ಟ್‌ನವರು ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಎಲ್ಲಾ ಕಡೆಗೆ ಒಪ್ಪಿಗೆ ಕೊಟ್ಟಾಗ ನಮ್ಮ ಹೈಕೋರ್ಟ್‌ನವರು ಏಕೆ ಒಪ್ಪಿಗೆ ಕೊಡುತ್ತಿಲ್ಲ? ಅದಕ್ಕಾಗಿ ತಾವು ದಯವಿಟ್ಟು ಹುಬ್ಬಳ್ಳಿ - ಧಾರವಾಡದಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಒಂದು ಗಂಭೀರ ಪರಿಸ್ಥಿತಿ ಇದೆ. ಈವೊಂದು ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ? ಅಷ್ಟೇ ಅಲ್ಲ, ಅಲ್ಲಿ ಜನರು ಮತ್ತು ವಕೀಲರು ಆಮರಣ ಉಪವಾಸ ಮಾಡಿ ಜೀವನ್ಮರಣದ ಪ್ರಶ್ನೆ ಇದ್ದಾಗ ಒಬ್ಬ ಸಚಿವರು ಅಲ್ಲಿಗೆ ಹೋಗಿ ಅವರ ಮನವೊಲಿಸಿ ಅವರುಗಳ ಉಪವಾಸ ನಿಲ್ಲಿಸುವಂತಹ ಕೆಲಸ ಆಗುತ್ತಿಲ್ಲ.

ಕೇವಲ ಜಿಲ್ಲಾಧಿಕಾರಿಗಳನ್ನು ಮಾತ್ರ ಕಳಿಸಿ ಅವರು ಹೇಳುತ್ತಿದ್ದಾರೆ. ಅದಕ್ಕಾಗಿ ಒಬ್ಬರು ಸಚಿವರು ಅಲ್ಲಿಗೆ ಹೋಗಬೇಕು. ಅಲ್ಲಿ ಸತ್ಯಾಗ್ರಹ ಕುಳಿತಿರುವವರ ಜೀವನ್ಮರಣದ ಪ್ರಶ್ನೆ ಇರುವುದರಿಂದ ಆ ನ್ಯಾಯವಾದಿಗಳನ್ನು ವಿಚಾರಣೆ ಮಾಡಿ ದಯವಿಟ್ಟು ಇದರ ಬಗ್ಗೆ ವಿಚಾರಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

ಛೇರ್ಮನ್ : ಹೇಳಿದ್ದೀರಲ್ಲ. ಪುನಃ ಪುನಃ ಅದೇ ಹೇಳುತ್ತಿದ್ದೀರಿ. ಈಗ ನೀವು ಅವರು ಹೇಳಿದ್ದನ್ನೇ ಹೇಳಬೇಡಿ. ಬೇರೆ ಇದ್ದರೆ ಹೇಳಿ.

ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ) : ಸನ್ಮಾನ್ಯ ಅಧ್ಯಕ್ಷರೇ, ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಧಾರವಾಡ-ಹುಬ್ಬಳ್ಳಿಯಲ್ಲಿ ಬಹಳ ಭಯಂಕರ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಾಗಲೇ ಏಳು ದಿವಸಗಳಿಂದ ಇಬ್ಬರು ವಕೀಲರು ಆಮರಣಾಂತ ಉಪವಾಸ ಮಾಡುತ್ತಿದ್ದಾರೆ. ಸನ್ಮಾನ್ಯ ಹಿರೇಮಠ ಎಂದು ಒಬ್ಬ ವಕೀಲರು ಮತ್ತು ಶ್ರೀಮತಿ ಮೀನಾಕ್ಷಿ ಕುಲಕರ್ಣಿ ಎಂದು ಇನ್ನೊಬ್ಬರು. ಇವರ ಜೊತೆಗೆ ಅನೇಕ ಜನ ಇವತ್ತು ಧಾರವಾಡದಲ್ಲಿ ಉಪವಾಸ ಕುಳಿತಿದ್ದಾರೆ.

ಛೇರ್ಮನ್ : ಅದನ್ನೆಲ್ಲ ಅವರು ಹೇಳಿದ್ದಾರೆ. ದಯವಿಟ್ಟು ಹೈಕೋರ್ಟ್ ಪೀಠ ಬೇಕು ಎಂದು ಸರ್ಕಾರಕ್ಕೆ ಒತ್ತಾಯ ಮಾಡಿ, ಅಷ್ಟೇನೆ.

ಶ್ರೀ ಚಂದ್ರಕಾಂತ ಬೆಲ್ಲದ್ : ಇದರ ಜೊತೆಗೆ ಈಗ ನಾನು ಕೇಳುತ್ತಿರುವುದು ಏನೆಂದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಈಗ ಅವರಿಗೆ ವಿನಂತಿ ಮಾಡಿಕೊಂಡರೂ ಸಹಿತ ಅವರು ಎದ್ದಿಲ್ಲ. ಅದಕ್ಕೆ ಮುಖ್ಯ ಕಾರಣ ಏನೆಂದರೆ ಈಗ ಮೂವತ್ತು ವರ್ಷಗಳಿಂದ ಈ ಬೇಡಿಕೆ ಇದೆ. ಮೂವತ್ತು ವರ್ಷಗಳಿಂದ ಸರ್ಕಾರಕ್ಕೆ ಬೇಡಿಕೆ ಇಟ್ಟು ರಾಜ್ಯಸರ್ಕಾರ ಅದನ್ನು ಗಣನೆಗೆ ತೆಗೆದುಕೊಂಡು ಅನೇಕ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಆದರೆ ಇದು ಈಡೇರಿಲ್ಲ. ಆ ದೃಷ್ಟಿಯಿಂದ ಅವರು ಏನು ಹೇಳುತ್ತಿದ್ದಾರೆ ಎಂದರೆ ಈಗ ಯಾರ ಮೇಲೂ ಅವರಿಗೆ ವಿಶ್ವಾಸ ಇಲ್ಲವೆಂದು ಉಪವಾಸ ಕುಳಿತುಬಿಟ್ಟಿದ್ದಾರೆ. ಅಲ್ಲಿ ಬಹಳ ಗಂಭೀರವಾದ ಪರಿಸ್ಥಿತಿ ಇದೆ. ನಿನ್ನೆಯಲ್ಲ ಮೊನ್ನೆ ನಾವೆಲ್ಲರಿಗೂ ವಿನಂತಿ ಮಾಡಿಕೊಂಡು ಯಾವುದೇ ತರಹ ಹಿಂಸೆಗೆ ಒಳಗಾಗದಂತೆ ತಾವು ನೋಡಿಕೊಳ್ಳಿ, ನಾವು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ. ದಯವಿಟ್ಟು ಹಿಂಸೆಗೆ ಹೋಗಬೇಡಿ ಎಂದು ಹೇಳಿದ್ದೇವೆ. ಆದ್ದರಿಂದ ಅವರು ಏನು ಸತ್ಯಾಗ್ರಹ ಕುಳಿತಿದ್ದಾರೆ ಅವರು ಮಾರಣಾಂತಿಕ ಸ್ಥಿತಿಯೊಳಗೆ ಇದ್ದಾರೆ. ಸರ್ಕಾರ ಹೋಗಿ ತೀವ್ರವಾಗಿ ಅವರನ್ನು ಎಬ್ಬಿಸಬೇಕು ಮತ್ತು ತೀವ್ರವಾಗಿ ಹೈಕೋರ್ಟ್ ಪೀಠವನ್ನು ಅಲ್ಲಿ ಮಾಡಬೇಕು. ಇವತ್ತು ಸನ್ಮಾನ್ಯ ರಾಷ್ಟ್ರದ ಒಬ್ಬ ಹಿರಿಯ ನಾಯಕರಾದ ಶ್ರೀ ನಿಜಲಿಂಗಪ್ಪನವರು ಸಹ ಹೇಳಿದ್ದಾರೆ ಅಧಿಕಾರದ ವಿಕೇಂದ್ರೀಕರಣ ದೃಷ್ಟಿಯಿಂದ ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಪೀಠ ಆಗಬೇಕು ಎಂದು. ಆ ದೃಷ್ಟಿಯಿಂದ ಸರ್ಕಾರ ಇದನ್ನು ಗಮನದಲ್ಲಿಟ್ಟುಕೊಂಡು ಅವರ ಉಪವಾಸವನ್ನು ನಿಲ್ಲಿಸಬೇಕು ಮತ್ತು ಹೈಕೋರ್ಟ್ ಪೀಠವನ್ನು ಧಾರವಾಡ - ಹುಬ್ಬಳ್ಳಿಯಲ್ಲಿ ಮಾಡಬೇಕೆಂದು ಹೇಳಿ ತಮ್ಮ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಕಾನೂನು ಮಂತ್ರಿಗಳಿಗೆ ಕೇಳುತ್ತಿದ್ದೇನೆ. ಈಗಿನ ಪರಿಸ್ಥಿತಿಯಲ್ಲಿ

ಅಲ್ಲಿಗೆ ಡಿ.ಸಿ. ಯವರು ಹೋದರೂ ಸಹಿತ ಅವರು ಒಪ್ಪುವುದಿಲ್ಲ. ದಯವಿಟ್ಟು ಸರ್ಕಾರ ಇದರ ಬಗ್ಗೆ ಪೂರ್ಣ ಗಮನಕೊಡಬೇಕು ಮತ್ತು ಮುಂದಿನ ಸ್ಥಿತಿಗೆ ಹೋಗದಂತೆ ನೋಡಿಕೊಳ್ಳಬೇಕು ಎಂದು ತಮ್ಮ ಮೂಲಕ ಅವರನ್ನು ನಾನು ವಿನಂತಿಮಾಡಿಕೊಳ್ಳುತ್ತೇನೆ.

+ **ಶ್ರೀಮತಿ ಪ್ರಮೀಳಾ ನೇಸರ್ಗಿ** (ಚಾಮರಾಜಪೇಟೆ) : ಮಾನ್ಯ ಅಧ್ಯಕ್ಷರೇ, ಇವತ್ತು 'ಜಸ್ಟೀಸ್ ಅಟ್‌ದಿ ಡೋರ್ಸ್' ಎನ್ನುತ್ತಾರೆ. ಮನೆಯ ಬಾಗಿಲಿಗೆ ನ್ಯಾಯ ದೊರಕಿಸಬೇಕಾಗಿರತಕ್ಕಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದೇವೆ. ಅಂತಹ ಪರಿಸ್ಥಿತಿಯಲ್ಲಿ ಬೀದರ್ ಹಾಗೂ ಬೇರೆಡೆಗಳಲ್ಲಿ ಇರತಕ್ಕಂಥವರು ಇಲ್ಲಿ ಹೈಕೋರ್ಟಿಗೆ ಬರುವುದಕ್ಕೆ ಎಷ್ಟು ಕಷ್ಟ ಇದೆಯೆಂಬುದು ಎಲ್ಲರಿಗೂ ಕೂಡ ಗೊತ್ತಿದೆ. ಮಧ್ಯಪ್ರದೇಶ, ಬೊಂಬಾಯಿಯಲ್ಲಿ ಮತ್ತು ಬೇರೆಬೇರೆ ಕಡೆಗಳಲ್ಲಿ ಹೈಕೋರ್ಟ್ ಪೀಠಗಳು ಇವೆ. ಆದರೆ ಕಾರಣಾಂತರಗಳಿಂದ ನಮ್ಮ ಹೈಕೋರ್ಟಿನಲ್ಲಿ ಒಪ್ಪಿಗೆ ಇನ್ನೂ ದೊರೆತಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಕಾನೂನು ಮಂತ್ರಿಗಳನ್ನು ಕೇಳತಕ್ಕಂಥಾದ್ದು ಏನೆಂದರೆ ನೀವು ಕಡ್ಡಾಯವಾಗಿ ನಮ್ಮ ಮುಖ್ಯ ನ್ಯಾಯಾಧೀಶರ ಹತ್ತಿರ ಹೋಗಬೇಕು. ಈಗ ಅವರು ಐದು ಜನರ ಕಮಿಟಿಯನ್ನು ಮಾಡಿಸಿದ್ದಾರೆ ಮತ್ತು ಅವರು ಕಮಿಟಿಯನ್ನು ಮಾಡಿ ಮುಂದೆ ಏನು ತೀರ್ಮಾನಕ್ಕೆ ಬರುತ್ತಾರೆ ಎನ್ನುವುದು ಬೇರೆ ವಿಷಯ. ಆದರೆ ಕಮಿಟಿಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಹೈಕೋರ್ಟಿಗೆ ಬೇಕಾಗಿರತಕ್ಕಂಥ ಕಟ್ಟಡ ಕಟ್ಟುವುದಕ್ಕೆ ಮತ್ತು ಬೇರೆ ಬೇಕಾದಂಥ ವ್ಯವಸ್ಥೆ ಎಲ್ಲವೂ ಕೂಡ ಹುಬ್ಬಳ್ಳಿ-ಧಾರವಾಡದಲ್ಲಿ ಇರತಕ್ಕಂಥ ಪರಿಸ್ಥಿತಿಯಲ್ಲಿ ನಾವು ಸಹಕಾರ ಕೊಡುತ್ತೇವೆ ಎಂದು ನೀವು ಈಗಾಗಲೇ ಹೇಳಿದ್ದೀರಿ, ಮಾಡುತ್ತೇವೆ ಎಂದು ಕೂಡ ಹೇಳಿದ್ದೀರಿ. ಹಲವಾರು ವರ್ಷಗಳಿಂದ ಇದು ನೆನಗುದಿಗೆ ಬಿದ್ದಿದೆ. ಹೈಕೋರ್ಟ್ ವಿಷಯವನ್ನು ಪ್ರೆಸ್ಟೀಜ್ ಆಗಿ ಇಟ್ಟುಕೊಂಡು ಕೊಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಪರಿಸ್ಥಿತಿಯನ್ನು ನಾವು ಕೂಡ ನಿರ್ಮಾಣ ಮಾಡಬಾರದು. ಆದ್ದರಿಂದ ತಾವು ಇವತ್ತಿನ ದಿವಸ ಮುಖ್ಯ ನ್ಯಾಯಾಧೀಶರಲ್ಲಿ ಹೋಗುವಾಗ ನಾವು ಕೂಡ ನಿಮ್ಮ ಜೊತೆಗೆ ಬರುತ್ತೇವೆ. ಇವತ್ತು ಮೀನಾಕ್ಷಿ ಕುಲಕರ್ಣಿ ಮತ್ತು ಅವರ ಸಹದ್ಯೋಗಿ ಹುಬ್ಬಳ್ಳಿಯಲ್ಲಿ ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ ಎಂದು ಹೇಳಿದಾಗ ನಮ್ಮ ಎಲ್ಲ ಮಹಿಳಾ ವಕೀಲರುಗಳು ಕೂಡ ಬಹಳ ಬೇಜಾರು ಮಾಡಿ ಕೊಂಡಿದ್ದಾರೆ. ನಾವು ಕೂಡ ಅವರಿಗೆ ಸಹಕಾರ ನೀಡುತ್ತೇವೆ ಎನ್ನತಕ್ಕಂಥ ಹೇಳಿಕೆಯನ್ನು ಮಹಿಳಾ ವಕೀಲರೆಲ್ಲರೂ ಕೂಡ ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ಈ ಕಾರಣದಿಂದ ನಾನು ತಮ್ಮಲ್ಲಿ ಕೇಳುತ್ತಿದ್ದೇನೆ ಏನೆಂದರೆ ಪರಿಸ್ಥಿತಿ ಬಿಗಡಾಯಿಸುವುದಕ್ಕೆ ಮುಂಚೆ ಮೀನಾಕ್ಷಿ ಕುಲಕರ್ಣಿ ಮತ್ತು ಬೇರೆ ವಕೀಲರು ಏನಿದ್ದಾರೆ ಅವರ ಪ್ರಾಣ ಹೋಗುವುದಕ್ಕೆ ಮುಂಚೆ ಅದನ್ನು ಉಳಿಸಬೇಕಾದದ್ದು ನಿಮ್ಮ ಧರ್ಮ. ಅಲ್ಲಿ ಕಾನೂನು ವ್ಯವಸ್ಥೆ ಕೆಟ್ಟು ಕ್ಲೈಂಟ್ಸ್‌ಗಳಿಗೆ ಅನ್ಯಾಯವಾಗಿದೆ, ಕಕ್ಷಿದಾರರಿಗೆ ಅನ್ಯಾಯವಾಗಿದೆ.

ಛೇರ್ಮನ್ : ಪೂರ್ತಿ ವಿವರಕ್ಕೆ ಹೋಗಬೇಡಿ. ದಯವಿಟ್ಟು ಸರ್ಕಾರವನ್ನು ಕೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸರ್ಕಾರ ತಕ್ಷಣ ಕ್ರಮ ತೆಗೆದುಕೊಂಡು ಕೆಲಸ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಾಟಾಳ್ ನಾಗರಾಜ್(ಚಾಮರಾಜನಗರ) : ಅಧ್ಯಕ್ಷರೇ, ನಾನು ಮಾನ್ಯ ಕಾನೂನು ಸಚಿವರಲ್ಲಿ

ಮನವಿ ಮಾಡುವುದು ಏನೆಂದರೆ ಮೊದಲು ಅಲ್ಲಿರತಕ್ಕಂಥ ಬಾರ್ ಅಸೋಸಿಯೇಶನ್‌ನವರನ್ನು ಕರೆದು ತಾವು ಮಾತನಾಡಿದ್ದೀರಾ ? ಸತ್ಯಾಗ್ರಹ ಕುಳಿತುಕೊಳ್ಳುವುದಕ್ಕೆ ಮುಂಚೆ ಅವರ ಜೊತೆ ಮಾತುಕತೆಯಾಡಿ, ನೀವು ಪ್ರಯತ್ನ ಪಟ್ಟಿದ್ದೀರಿ. ನಾವೇನೂ ನೀವು ಪ್ರಯತ್ನ ಪಟ್ಟಿಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಅಲ್ಲಿಗೆ ಪೀಠ ಬರಬೇಕೆಂದು ತಾವು ತೀವ್ರವಾದ ಪ್ರಯತ್ನ ಪಟ್ಟಿದ್ದೀರಿ. ಎಷ್ಟು ದಿವಸಗಳ ಒಳಗೆ ಆಗುತ್ತದೆ ಎನ್ನತಕ್ಕಂಥಾದ್ದು ಬಹಳ ಮುಖ್ಯವಾದದ್ದು. ಅವರು ಸತ್ಯಾಗ್ರಹ ಕುಳಿತುಕೊಳ್ಳುವುದಕ್ಕೆ ಮುಂಚೆ ನೀವು ಅವರ ಜೊತೆಗೆ ಮಾತುಕತೆಯಾಡಿದ್ದರೆ ಅವರು ಸತ್ಯಾಗ್ರಹವನ್ನು ನಿಲ್ಲಿಸುತ್ತಿದ್ದರೋ ಏನೋ ಎಂದು ನನಗನ್ನಿಸುತ್ತದೆ. ಮುಖ್ಯಮಂತ್ರಿಗಳು ಅಲ್ಲಿ ಮನವಿ ಮಾಡಿದ್ದಾರೆ. ಹುಬ್ಬಳ್ಳಿಯ ಒಂದು ಕಡೆ ಅವರು ಕೊಟ್ಟ ಹೇಳಿಕೆಯನ್ನು ನಾನು ಓದಿದೆ. ನೀವು ಸತ್ಯಾಗ್ರಹ ನಿಲ್ಲಿಸಿ, ನಾವು ಮಾಡುತ್ತೇವೆ ಎನ್ನತಕ್ಕಂಥಾದ್ದು ಹೇಳಿದ್ದಾರೆ.

ಛೇರ್ಮನ್ : ಅವರು ಈಗ ಏನು ಹೇಳುತ್ತಾರೆ ಎಂದು ಕೇಳೋಣ.

ಶ್ರೀ ವಾಟಾಳ್ ನಾಗರಾಜ್ : ನಮಗೆ ಸ್ಪಷ್ಟವಾದ ಉತ್ತರ ಬೇಕು. ಈ ಬಗ್ಗೆ ಸರ್ಕಾರದ ನಿಲುವು ಏನು ? ಏಕೆಂದರೆ ಇದು ಇನ್ನೂ ತೀರಾ ಗಂಭೀರವಾದಂಥ ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ಅವಕಾಶ ಕೊಡಬಾರದು. ಆ ದೃಷ್ಟಿಯಿಂದ ತಾವು ಸ್ಪಷ್ಟವಾದ ನಿಖರವಾದ ಒಂದು ಹೇಳಿಕೆಯನ್ನು ಕೊಡಬೇಕು.

+ ಶ್ರೀ ಎಂ. ಪಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಮಾನ್ಯ ಸಭಾದ್ಯಕ್ಷರೇ, ಸರ್ಕಾರದ ಸ್ಪಷ್ಟವಾಗಿರತಕ್ಕಂಥ ನಿಲುವು, ಸುಮಾರು ಹದಿನೈದು ವರ್ಷಗಳಿಂದ ಸರ್ಕಾರಗಳ ಸ್ಪಷ್ಟವಾಗಿರತಕ್ಕಂಥ ನಿಲುವು, ವಿಧಾನಮಂಡಲಗಳ ಸ್ಪಷ್ಟವಾಗಿರತಕ್ಕಂಥ, ನಿಲುವು, ಹುಬ್ಬಳ್ಳಿ, ಧಾರವಾಡದಲ್ಲಿ ಉಚ್ಚನ್ಯಾಯಾಲಯದ ಒಂದು ಪೀಠ ಆಗಬೇಕು ಎಂದು. ಇದು ನಮ್ಮ ಸರ್ಕಾರದ ನಿಲುವು ಅಲ್ಲ, ಇನ್ನು ಮುಂದೆ ಬರತಕ್ಕಂಥ ಸರ್ಕಾರದ್ದು, ಹಿಂದಿನ ಸರ್ಕಾರಗಳ ಎಲ್ಲರ ನಿಲುವು ಒಂದೇ. ಇದರಲ್ಲಿ ಮುಖ್ಯಮಂತ್ರಿಗಳು ಕಳೆದ ಮೂರು ವರ್ಷಗಳಲ್ಲಿ ನಾಲ್ಕು ಪತ್ರಗಳನ್ನು ಬರೆದಿದ್ದಾರೆ. ರಾಜ್ಯದ ಉಚ್ಚನ್ಯಾಯಾಲಯದವರು ಈ ಹಿಂದೆ 1996ನೇ ಇಸವಿಯಲ್ಲಿ ಸರ್ಕಾರಕ್ಕೆ ಒಂದು ಪತ್ರ ಬರೆದಾಗ ಕೆಲವು ಮಾಹಿತಿಗಳನ್ನು ಕೇಳಿದ್ದರು. ರಾಜ್ಯದ ಉಚ್ಚನ್ಯಾಯಾಲಯ ಪೀಠವನ್ನು ತೆರೆಯಬೇಕಾದರೆ ಅಲ್ಲಿ ಹೈಕೋರ್ಟ್ ಕಟ್ಟಡ ಬೇಕಾಗುತ್ತದೆ ಮತ್ತು ಅಲ್ಲಿರತಕ್ಕಂಥ ನ್ಯಾಯಾಮೂರ್ತಿಗಳಿಗೆ ಕಟ್ಟಡಗಳು ಬೇಕಾಗುತ್ತವೆ ಮತ್ತು ಪ್ರತಿ ವರ್ಷಕ್ಕೆ ಅಲ್ಲಿರತಕ್ಕಂಥ ಖರ್ಚುಗಳಿಗೆ ನೀವು ಏನು ಮಾಡುತ್ತಿದ್ದೀರಿ ಎಂಬುದರ ಬಗ್ಗೆ ಸಮಗ್ರವಾಗಿರತಕ್ಕಂಥ ಮಾಹಿತಿಯನ್ನು ಕೇಳಿದ್ದರು. ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಒಂದು ಪತ್ರವನ್ನು ಬರೆದರು. ನಾವು ಮಾನ್ಯ ಮುಖ್ಯನ್ಯಾಯಾಧೀಶರಿಗೆ ರಾಜ್ಯಸರ್ಕಾರ ಅಲ್ಲಿ ಒಂದು ಹೈಕೋರ್ಟಿನ ಪೀಠವನ್ನು ಸ್ಥಾಪನೆ ಮಾಡುವುದಕ್ಕೆ ಮತ್ತು ನ್ಯಾಯಾಧೀಶರಿಗೆ ಬೇಕಾಗಿರತಕ್ಕಂಥ ವಸತಿ ಮತ್ತು ಅಲ್ಲಿರತಕ್ಕಂಥ ಕಚೇರಿ ನಿರ್ಮಾಣ ಮಾಡುವುದಕ್ಕೆ 20 ಎಕರೆ ಜಮೀನು ಯಾವುದಿದೆ ಆ ಜಮೀನನ್ನು ಈಗಾಗಲೇ ಐಡೆಂಟಿಫೈ ಮಾಡಿದ್ದೇವೆ. ಈ ಕಟ್ಟಡಗಳನ್ನು ಕಟ್ಟಿ ಪೂರೈಸುವಲ್ಲಿವರೆಗೆ ಅಲ್ಲಿರತಕ್ಕಂಥ ಚೀಫ್ ಇಂಜಿನಿಯರ್, (ಕಮ್ಯುನಿಕೇಶನ್ ಅಂಡ್ ಬಿಲ್ಡಿಂಗ್ಸ್) ಅವರಿಗೆ ಸಂಬಂಧ ಪಟ್ಟಿರತಕ್ಕಂಥ ಒಂದು ಕಟ್ಟಡ ಇದೆ. ಆ ಕಟ್ಟಡದಲ್ಲಿ ಅದನ್ನು

ನಡೆಸಲಿಕ್ಕೆ ಇರತಕ್ಕಂಥ ಏರ್ಪಾಡನ್ನು ಮಾಡುತ್ತೇವೆ ಮತ್ತು ಸರ್ಕಾರದ ವತಿಯಿಂದ ಹೈಕೋರ್ಟಿಗೆ ಯಾವುದನ್ನೆಲ್ಲ ಕೇಳುತ್ತಾರೆ ಹಣದ ರೂಪದಲ್ಲಿ ಮತ್ತು ಇನ್‌ಫ್ರಾಸ್ಟ್ರಕ್ಚರ್ ರೂಪದಲ್ಲಿ ಅದೆಲ್ಲವನ್ನೂ ಕೊಡುವುದಕ್ಕೆ ನಾವು ತಯಾರಾಗಿದ್ದೇವೆ ಎಂದು ಹೇಳಿ ಸಂಪೂರ್ಣವಾದ ಮಾಹಿತಿಯನ್ನು ಅವರಿಗೆ ನಾವು ಕೊಟ್ಟು ಆಯಿತು. ಅದಾದಮೇಲೆ ಹೈಕೋರ್ಟಿನಲ್ಲಿ ಇರತಕ್ಕಂಥ ಎಲ್ಲ ನ್ಯಾಯಾಧೀಶರುಗಳು ಸೇರಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಿತ್ತು. ಆದರೆ ಆ ತೀರ್ಮಾನ ತೆಗೆದುಕೊಳ್ಳಲಿಲ್ಲ. ಅದಾದಮೇಲೆ ಮುಖ್ಯಮಂತ್ರಿಗಳು ಪುನಃ ಒಂದು ಪತ್ರ ಬರೆದರು. ಈ ಹಿಂದೆ ಎರಡು ಪತ್ರಗಳನ್ನು ಬರೆದಿದ್ದೇವೆ, ನೀವು ಕೇಳಿರತಕ್ಕಂಥ ಮಾಹಿತಿಯನ್ನು ಕೊಟ್ಟಿದ್ದೇವೆ, ದಯವಿಟ್ಟು ಇದರ ಬಗ್ಗೆ ರಾಜ್ಯ ಉಚ್ಚನ್ಯಾಯಾಲಯದ ಪೀಠದ ಬಗ್ಗೆ ಒಂದು ಕ್ರಮವನ್ನು ಕೈಗೊಂಡು ಹುಬ್ಬಳ್ಳಿ ಧಾರವಾಡದಲ್ಲಿ ಒಂದು ಪೀಠವನ್ನು ತೆರೆಯುವುದಕ್ಕೆ ಹತ್ತಾರು ವರ್ಷಗಳಿಂದ ಇರುವ ನಮ್ಮ ಬೇಡಿಕೆಯನ್ನು ನೀವು ಈಡೇರಿಸಿಕೊಡಬೇಕೆಂದು ಪತ್ರವನನ್ನು ನಾವು ಬರೆದೆವು. ಅದಾದಮೇಲೆ 1998ನೇ ಇಸವಿಯಲ್ಲಿ ಪುನಃ ಒಂದು ಪತ್ರ ಬರೆದು ಅವರ ಗಮನಕ್ಕೆ ತಂದೆವು. ನಿನ್ನೆಯಲ್ಲ ಮೊನ್ನೆ ಮುಖ್ಯ ಮಂತ್ರಿಗಳು ಪುನಃ ಮುಖ್ಯನ್ಯಾಯಾಧೀಶರಿಗೆ ಒಂದು ಪತ್ರ ಬರೆದಿದ್ದಾರೆ. ಇದಾದಮೇಲೆ ಮುಖ್ಯನ್ಯಾಯಾಧೀಶರು ಈಗಾಗಲೇ ಐದು ಜನ ನ್ಯಾಯಾಧೀಶರುಗಳ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಇದನ್ನು ರಚನೆ ಮಾಡಿ ಬಹುಶಃ ಈ ಒಂದು ಪೀಠವನ್ನು ತೆರೆಯುವುದಕ್ಕೆ ಒಂದು ವರದಿಯನ್ನು ಕೊಡಬೇಕೆಂದು ಕೂಡ ಕೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಉಚ್ಚನ್ಯಾಯಾಲಯದ ಮುಖ್ಯನ್ಯಾಯಾಧೀಶರನ್ನು ಭೇಟಿಮಾಡಿ ಮಾತುಕತೆಯಾಡಬೇಕೆಂದು ಹೇಳುತ್ತಾ ಇರತಕ್ಕಂಥ ನಿರ್ಧಾರಕ್ಕೆ ಬಂದಿದ್ದೇವೆ. ಆ ಒಂದು ಕಾರ್ಯಕ್ರಮವನ್ನು ಇನ್ನು ಒಂದು ವಾರದೊಳಗೆ ಮಾಡುತ್ತೇವೆ. ಆ ಭೇಟಿ ಆಗತಕ್ಕಂಥ ಕಾರ್ಯಕ್ರಮ ನಿಗದಿಯಾಗಬೇಕಾಗಿದೆ. ಆ ಕೆಲಸವನ್ನು ಮಾಡಲಿಕ್ಕೆ ಇರತಕ್ಕಂಥ ಕ್ರಮವನ್ನು ಕೂಡ ನಾವು ಕೈಗೊಂಡಿದ್ದೇವೆ. ಇದಕ್ಕೆ ಮುಂಚೆ ಶ್ರೀಮಾನ್ ಬೊಮ್ಮಾಯಿಯವರು ಲಿಲ್ಲಿ ಹ್ಯೂಮನ್ ರಿಸೋರ್ಸಸ್ ಮಂತ್ರಿಯಾಗಿದ್ದಾಗ ರಾಜ್ಯಸರ್ಕಾರದ ವತಿಯಿಂದ ಈ ಉಚ್ಚನ್ಯಾಯಾಲಯದ ಪೀಠದ ಸ್ಥಾಪನೆಗೆ ಸಂಬಂಧಪಟ್ಟಿರತಕ್ಕಂಥ ಎಲ್ಲ ಮಾಹಿತಿಗಳನ್ನು ಕೇಳಿ ನಾವು ಆ ಮಾಹಿತಿಗಳನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ. ಅಲ್ಲದೆ ಈ ಒಂದು ವಿಚಾರವನ್ನು ಶ್ರೀಮಾನ್ ಬೊಮ್ಮಾಯಿಯವರು ರಾಜ್ಯಸಭೆಯಲ್ಲಿ ಎತ್ತಿದಾಗ ಅಂದಿನ ಕಾನೂನು ಮಂತ್ರಿಗಳು ಒಂದು ಉತ್ತರ ಕೊಟ್ಟರು. ನಾವು ಕೇಂದ್ರಸರ್ಕಾರ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆದರೆ ರಾಜ್ಯ ಉಚ್ಚನ್ಯಾಯಾಲಯದಿಂದ ನಮಗೆ ಇನ್ನೂ ಶಿಫಾರಸ್ಸು ಬಂದಿಲ್ಲ. ಈ ಶಿಫಾರಸ್ಸು ಬಂದಾದಮೇಲೆ ನಾವು ಈ ಕ್ರಮವನ್ನು ಕೈಗೊಳ್ಳುತ್ತೇವೆ ಎಂದು ಅವರು ಹೇಳಿದರು. ಇದಾದಮೇಲೆ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಈ ನಿರಶನ ಮಾಡುವುದಕ್ಕೆ ಮೊದಲು ನೀವು ಮಾತುಕತೆ ಮಾಡಿದ್ದೀರಾ ಎಂದು ಕೇಳಿದ್ದಾರೆ. ಕೆಲವು ದಿವಸಗಳ ಹಿಂದೆ ಧಾರವಾಡದಲ್ಲಿ ಧಾರವಾಡ ಬಾರ್ ಅಸೋಸಿಯೇಶನ್‌ನವರ ಮೀಟಿಂಗ್‌ಗೆ ನಾನೇ ಹೋಗಿದ್ದೆ. ಆಗ ಲಿಲ್ಲಿರತಕ್ಕಂಥ ಸದಸ್ಯರನ್ನೆಲ್ಲ ನಾನು ಭೇಟಿಮಾಡಿದ್ದೆ. ಈ ಅಧ್ಯಕ್ಷರು ಯಾರು ಇವತ್ತು ಆಮರಣಾಂತ ಉಪವಾಸ ಕೂತಿದ್ದಾರೆ, ಅವರನ್ನು ಕೂಡ ನಾನು ಭೇಟಿ ಮಾಡಿದ್ದೆ. ಮಾನ್ಯ ಹೀರೆಮಠ್ ಅವರಿಗೆ ಪ್ರತಿಯೊಂದು ವಿಚಾರ ಕೂಡ ಗೊತ್ತಿದೆ. ಸರ್ಕಾರ ಕೈಗೊಂಡಿರತಕ್ಕಂಥ ಕ್ರಮ ಯಾವುದು ಎಂದು

ಅವರಿಗೆ ಗೊತ್ತಿದೆ, ಮುಂದೆ ನಾವು ಏನು ಮಾಡುತ್ತೇವೆ ಎಂಬುದನ್ನು ಕೂಡ ಹೇಳಿದ್ದೆವು. ಅದಾದಮೇಲೆ ಶ್ರೀ ಎಸ್. ಎಸ್. ಪಾಟೀಲರ ಜೊತೆಯಲ್ಲಿ ಅಧ್ಯಕ್ಷರು ಮತ್ತು ಇತರ ವಕೀಲರುಗಳು ನನ್ನ ಮನೆಗೂ ಬಂದರು. ಮನೆಯಲ್ಲಿ ಮಾತುಕತೆ ಮಾಡಿದಾಗ ನಾನು ಹೇಳಿದೆ ಏನೆಂದರೆ ರಾಜ್ಯ ಸರ್ಕಾರ ತೆಗೆದುಕೊಂಡಿರತಕ್ಕಂಥ ಇಷ್ಟೆಲ್ಲ ಕ್ರಮ ಇದೆ, ಪುನಃ ಹೊಸದಾಗಿ ಮುಖ್ಯನ್ಯಾಯಾಧೀಶರು ನೇಮಕ ಆಗಿದ್ದಾರೆ. ಪುನಃ ಅವರನ್ನು ಭೇಟಿ ಆಗುವುದಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆ. ಪುನಃ ಅವರಿಗೆ ಒಂದು ಪತ್ರ ಬರೆಯುತ್ತೇವೆ. ಆದ್ದರಿಂದ ತಾವು ದಯವಿಟ್ಟು ಈ ನಿರಶನ ಮಾಡಬೇಡಿ. ಇದು ರಾಜ್ಯಸರ್ಕಾರ ನೇರವಾಗಿ ಸ್ಥಾಪನೆ ಮಾಡಲಿಕ್ಕೆ ಇರತಕ್ಕಂಥ ಕಾರ್ಯಕ್ರಮ ಅಲ್ಲ. ಕೇಂದ್ರ ಸರ್ಕಾರ ಕೂಡ ಈ ಕಾರ್ಯಕ್ರಮವನ್ನು ಕೈಗೊಳ್ಳಬೇಕಾದರೆ ರಾಜ್ಯ ಉಚ್ಚನ್ಯಾಯಾಲಯ ಸಂಪೂರ್ಣವಾದ ಶಿಫಾರಸ್ಸು ಮಾಡದೇಹೋದರೆ ಕೇಂದ್ರಸರ್ಕಾರ ಕೂಡ ಇದಕ್ಕೆ ಕ್ರಮವನ್ನು ಕೈಗೊಳ್ಳುವುದಕ್ಕೆ ಆಗುವುದಿಲ್ಲ. ಈ ಹಿನ್ನೆಲೆಯಲ್ಲಿ ಇವತ್ತು ನಾನು ಇನ್ನೊಂದನ್ನು ಹೇಳುತ್ತಿದ್ದೇನೆ. ಇದು ನಮ್ಮ ರಾಜ್ಯಸರ್ಕಾರಕ್ಕೆ ಸಂಬಂಧಪಟ್ಟಿರತಕ್ಕಂಥ ಒಂದು ವಿಚಾರ ಆದರೂ ಕೂಡ ನಮ್ಮ ಭಾರತದಲ್ಲಿ ಇರತಕ್ಕಂಥ ಇತರ ರಾಜ್ಯಗಳು ಕೂಡ ಈ ಹೈಕೋರ್ಟು ಪೀಠಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ತೆರೆಯಬೇಕೆಂದು ಹೇಳುತ್ತಾ ಇರತಕ್ಕಂಥ ಬೇಡಿಕೆಯನ್ನು ಇಟ್ಟಿದ್ದಾರೆ. ಆದ್ದರಿಂದ ಈ ಬಗ್ಗೆ ನಾನು ಬಹಳ ಪ್ರಮುಖವಾಗಿ ಹೇಳುತ್ತಿದ್ದೇನೆ. ಅದೇನೆಂದರೆ, ಪ್ರಧಾನಿಗಳು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಕೂಡ ಚರ್ಚೆಮಾಡಿ ಇದನ್ನು ಒಂದು ನೀತಿಯ ಪ್ರಶ್ನೆ ಮಾಡಿ ಯೋಗ್ಯ ಕಾರ್ಯಕ್ರಮವನ್ನು ನಿಯಮವನ್ನು ರೂಪಿಸಬೇಕು ಎನ್ನತಕ್ಕಂಥ ಕ್ರಮವನ್ನು ಕೂಡ ಕೈಗೊಳ್ಳಬೇಕಾಗುತ್ತದೆ. ಆದ್ದರಿಂದ ನಾನು ಹೇಳುತ್ತಿದ್ದೇನೆ, ರಾಷ್ಟ್ರಮಟ್ಟದಲ್ಲಿ ಪ್ರಧಾನಿಗಳು, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮತ್ತು ಬಾಕಿ ಇರತಕ್ಕಂಥ ನ್ಯಾಯಾಧೀಶರು ಚರ್ಚೆ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ರಾಜ್ಯಸರ್ಕಾರದಲ್ಲಿ ಮುಖ್ಯಮಂತ್ರಿಗಳು ಏನು ಮಾಡಬಹುದು ಹೇಳಿ. ಮುಖ್ಯಮಂತ್ರಿಗಳು ಭೇಟಿ ಮಾಡಬಹುದು, ಚರ್ಚೆ ಮಾಡಬಹುದು ಮತ್ತು ಈಗಾಗಲೇ ಅವರಿಗೆ ಪತ್ರ ಬರೆದಿದ್ದೇವೆ. ಇನ್ನು ಮುಂದೆ ಅವರನ್ನು ಪುನಃ ಭೇಟಿ ಮಾಡಿ ಒಂದು ಕಾರ್ಯಕ್ರಮ ಕೈಗೊಳ್ಳುತ್ತೇವೆ ಎಂದು ನಾವು ಹೇಳುತ್ತಿದ್ದೇವೆ. ಕಡೆಗೆ ಅಂತಿಮವಾಗಿ ಸ್ಪೇಟ್ ರಿಆರ್ಗನೈಸೇಶನ್ ಆಕ್ಟ್ ಯಾವುದಿದೆ, ಅದರಲ್ಲಿ ಸೆಕ್ಷನ್ 51ರ ಪ್ರಕಾರ ಆ ತೀರ್ಮಾನವನ್ನು ಕೈಗೊಳ್ಳಬೇಕಾದರೆ ಉಚ್ಚನ್ಯಾಯಾಲಯದವರು ಶಿಫಾರಸ್ಸು ಮಾಡದೇ ಹೋದರೆ ಈ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ರಾಜ್ಯಸರ್ಕಾರದವರು ಇದು ಒಂದು ಆರ್ಡರ್ ಮಾಡಿಬಿಟ್ಟು ಉಚ್ಚನ್ಯಾಯಾಲಯದ ಒಂದು ಪೀಠವನ್ನು ಮಾಡತಕ್ಕಂಥಾದ್ದಕ್ಕೆ ಇರತಕ್ಕಂಥ ಅಧಿಕಾರ ನಮ್ಮ ಕೈಯಲ್ಲಿ ಇಲ್ಲ.

ಈ ಹಿಂದೆ, ಒಂದು ಸಲ ಇಲ್ಲಿಗೆ ಬಂದಿದ್ದ ಸಂದರ್ಭದಲ್ಲಿ, ನಾನು ಮತ್ತು ಮುಖ್ಯ ಮಂತ್ರಿಗಳೂ ಕೂಡ ಭೇಟಿ ಮಾಡಿದ್ದೆವು. ಅಂದಿನ ಮುಖ್ಯ ನ್ಯಾಯಾಧೀಶರಾಗಿದ್ದಂಥ ಕುಂಶಿಯವರು, ಇಲ್ಲಿ ಗವರ್ನರ್ ಮನೆಯಲ್ಲಿ ಉಳಿದಿದ್ದರು. ನಾವಿಬ್ಬರೂ ಹೋಗಿ, ಆ ಸಂದರ್ಭದಲ್ಲಿ ಭೇಟಿ ಮಾಡಿ ಈ ವಿಚಾರವನ್ನು ಅವರ ಜೊತೆಯಲ್ಲಿಯೂ ಕೂಡ ಪ್ರಸ್ತಾಪ ಮಾಡಿದೆವು. ಇದು ಬಹಳ ವರ್ಷಗಳ ಬೇಡಿಕೆ. ಬಹುಶಃ ನಾನು ಹೇಳುತ್ತಾ ಇದ್ದೇನೆ, ಶ್ರೀಮತಿ ಪ್ರಮೀಳಾ ಅವರು ಹೇಳಿದಹಾಗೆ, ನಾವು ಕೊಡುತ್ತಾ ಇರತಕ್ಕಂಥ

ನ್ಯಾಯ ಸುಲಭ ದರದಲ್ಲಿಯೂ ಇರಬೇಕು, ನಾವು ಕೊಡುತ್ತಾ ಇರತಕ್ಕಂಥ ನ್ಯಾಯ ಅವರ ಮನೆ ಬಾಗಿಲಿಗೆ ಕೊಡುವ ಹಾಗೆಯೂ ಆಗಬೇಕು ಎಂದು ಹೇಳತಕ್ಕಂತಾದ್ದು. 600-700 ಕಿಲೋ ಮೀಟರಿನಿಂದ ಬೆಂಗಳೂರಿಗೆ ಬಂದು ಈ ಕೆಲಸವನ್ನು ಮಾಡಲಿಕ್ಕೆ ಕಷ್ಟವಾಗುತ್ತದೆ. ಆದುದರಿಂದ, ಒಂದು ನ್ಯಾಯಪೀಠವನ್ನು ತೆರೆಯುವುದಕ್ಕೆ ಹೇಳಲಿ. ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳಿದ್ದೇನೆ. ಸರ್ವೋಚ್ಚ ನ್ಯಾಯಾಲಯದ ಪೀಠವನ್ನು ದಕ್ಷಿಣ ಭಾಗದಲ್ಲಿ ತೆರೆಯಬೇಕೆಂದು ಹೇಳಿ. ಆದರಲ್ಲೂ ಬೆಂಗಳೂರಿನಲ್ಲಿಯೇ ತೆರೆಯಬೇಕೆಂದು ನಾನು ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ರಾಷ್ಟ್ರಮಟ್ಟದಲ್ಲಿ ಒಂದು ಚರ್ಚೆ ನಡೆಯುತ್ತಾ ಇದೆ. ಆದ್ದರಿಂದ, ರಾಜ್ಯಸರ್ಕಾರ ಇಷ್ಟೆಲ್ಲಾ ಮಾಡಿದರೂ ಕೂಡ, ಈಗ ನೀವು ಮಾಡಬೇಕು, ನೀವು ಮಾಡಬೇಕೆಂದು ಹೇಳುತ್ತಿದ್ದಾರೆ. ನಮ್ಮ ನಿಲುವು ಬಹಳ ಸ್ಪಷ್ಟ. ನಿಮ್ಮ ನಿಲುವು ಎಷ್ಟು ಸ್ಪಷ್ಟ ಇದೆಯೋ ಅಷ್ಟೇ ನಮ್ಮ ನಿಲುವೂ ಕೂಡ ಸ್ಪಷ್ಟ. ಆದ್ದರಿಂದ, ಅಲ್ಲಿ ಆಮರಣ ಉಪವಾಸ ಕುಳಿತಿರತಕ್ಕಂಥ ನಮ್ಮ ಮಿತ್ರರು ಯಾರಿದ್ದಾರೆ, ಒಂದು ಉಚ್ಚ ನ್ಯಾಯಾಲಯ ತೆಗೆದುಕೊಳ್ಳಬೇಕಾದ ತೀರ್ಮಾನಕ್ಕೆ ರಾಜ್ಯಸರ್ಕಾರದವರು ಎಷ್ಟರಮಟ್ಟಿಗೆ ಮಾಡಬಹುದೋ ಅಲ್ಲಿಯವರೆಗೆ ಹೋಗಬಹುದು. ಅದನ್ನು ಬಿಟ್ಟು ಹೋಗುವುದಕ್ಕಾಗುತ್ತದೆಯೇ? ಇದು ತಮಗೆಲ್ಲಾ ಗೊತ್ತಿದೆ. ಈ ಹಿನ್ನೆಲೆಯಲ್ಲಿ ನಾವಿನ್ನೂ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಜೊತೆ ಮಾತನಾಡಬೇಕಾಗುತ್ತೆ, ಪ್ರಧಾನಿಯವರ ಜೊತೆಯಲ್ಲಿ ಮಾತನಾಡಬೇಕಾಗುತ್ತೆ. ಪ್ರಧಾನಿಯವರು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಜೊತೆಯಲ್ಲಿ ಮಾತನಾಡಬೇಕಾಗುತ್ತೆ. ಎಲ್ಲಾ ಸಮಗ್ರವಾದ ಚಿತ್ರ ಬರುವವರೆಗೆ, ನಮ್ಮ ಮಿತ್ರರು ತೆಗೆದುಕೊಂಡಿರತಕ್ಕ ಕ್ರಮ ಯಾವುದಿದೆ, ಅದನ್ನು ಮೆಚ್ಚಬೇಕೆಂದು ನಾನು ಹೇಳುತ್ತೇನೆ. ನಾವು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಿರತಕ್ಕ ಹಿನ್ನೆಲೆಯಲ್ಲಿ ಈ ಆಮರಣ ಉಪವಾಸವನ್ನು ಅವರು ದಯವಿಟ್ಟು ಹಿಂದಕ್ಕೆ ತೆಗೆದುಕೊಳ್ಳಬೇಕು. ಇದೇನಾಗುತ್ತದೆ ಎಂದರೆ, ಬಾಯಿಂದ ಬಾಯಿಗೆ, ಕಾಲಿನಿಂದ ಕಾಲಿಗೆ, ದಿನದಿಂದ ದಿನಕ್ಕೆ ಅದು ವಿಸ್ತಾರವಾಗಿ ಬೆಳೆದು ಅದು ಕಾನೂನಿನ ಒಂದು ಅವ್ಯವಸ್ಥೆಯಾಗುತ್ತೆ. ನಾನು ಮೇಲ್ಮನೆಯಲ್ಲೂ ಕೂಡ ಇದೇ ಮಾತನ್ನು ಆಡಿದ್ದೇನೆ. ಮುಖ್ಯಮಂತ್ರಿಗಳೂ ಹೇಳಿದ್ದಾರೆ. ದಯವಿಟ್ಟು ನಿಮ್ಮ ಮುಷ್ಕರವನ್ನು ಹಿಂದಕ್ಕೆ ತೆಗೆದುಕೊಳ್ಳಿ. ರಾಜ್ಯಸರ್ಕಾರ ಎಲ್ಲಾ ಪ್ರಯತ್ನವನ್ನೂ ಮಾಡುತ್ತದೆ, ಇನ್ನು ಮುಂದೆಯೂ ಮಾಡುತ್ತದೆ. ಆದ್ದರಿಂದ ನಾವೆಲ್ಲರೂ ಒಟ್ಟಾಗಿ ಸೇರಿ, ಅವರಿಗೆ ಒಂದು ಮನವಿಯನ್ನು ಮಾಡೋಣ. ತಾವು ದಯವಿಟ್ಟು ಆಮರಣ ಉಪವಾಸ ಮುಷ್ಕರವನ್ನು ಹಿಂದಕ್ಕೆ ತೆಗೆದುಕೊಳ್ಳಿ. ರಾಜ್ಯಸರ್ಕಾರ, ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಒಟ್ಟಾರೆ ಸೇರಿ, ಇದರ ಬಗ್ಗೆ ಕ್ರಮವನ್ನು ಕೈಗೊಳ್ಳುವುದಕ್ಕೆ ಇರತಕ್ಕ ಪ್ರಯತ್ನವನ್ನು ನಾವು ಮಾಡುತ್ತೇವೆ. ಆ ಪ್ರಯತ್ನಕ್ಕೆ ಅವರ ಬೆಂಬಲವನ್ನೂ ನಾನು ಕೇಳುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಸರ್ಕಾರ ಪ್ರಯತ್ನವನ್ನು ಮಾಡುತ್ತಿದೆ ಎನ್ನುವುದರ ಬಗ್ಗೆ ಖಂಡಿತ, ನಿಮ್ಮ ಈ ಉತ್ತರದಿಂದ ನಮಗೆ ಅನಿಸುತ್ತಾ ಇದೆ. ನೀವು ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದೀರಿ. ಅಲ್ಲಿ ಉಪವಾಸ ಕುಳಿತಿರುವವರೂ ಕೂಡ ಪಕೀಲರು. ಅವರು ಕೂಡ ಸಾಕಷ್ಟು ತಿಳುವಳಿಕೆ ಇರುವವರು. ಅವರಿಗೆ ಏನನಿಸಿದೆ ಎಂದರೆ, ಸರ್ಕಾರದಿಂದ ಏನು ಒತ್ತಡ ಆಗಬೇಕಾಗಿತ್ತೋ ಅದು ಆಗಿಲ್ಲವೆಂಬುದು ಬಂದಿದೆ. ಅಲ್ಲೇನು ನಡೆದಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನೀವು ಪ್ರಯತ್ನ

ಮಾಡಿಲ್ಲವೆಂದು ನಾನು ಖಂಡಿತಾ ಹೇಳುತ್ತಾ ಇಲ್ಲ. ಮಾನ್ಯ ಎಸ್. ಎಸ್. ಪಾಟೀಲರಿಗೂ ಈ ವಿಚಾರ ಚೆನ್ನಾಗಿ ಗೊತ್ತಿದೆ. ಸರ್ಕಾರದಿಂದ ಏನು ಒತ್ತಡ ತರಬೇಕೋ ಅದು ಬಂದಿಲ್ಲವೆಂಬ ಒಂದು ಭಾವನೆ ಇದೆ. ಅದಕ್ಕೋಸ್ಕರ ಯಾರು ಉಪವಾಸ ಕುಳಿತಿದ್ದಾರೆ, ಅಂತಹ ವಕೀಲರನ್ನು, ತಕ್ಷಣ ಮಂತ್ರಿಮಂಡಲದಿಂದ ತಾವು ಯಾರಾದರೂ ಭೇಟಿ ಮಾಡಿ, ಅವರು ಉಪವಾಸವನ್ನು ವಾಪಸ್ ತೆಗೆದುಕೊಳ್ಳುವ ದಿಕ್ಕಿನಲ್ಲಿ ಮೊದಲ ಪ್ರಯತ್ನವನ್ನು ತಾವು ದಯವಿಟ್ಟು ಮಾಡಬೇಕು. ಎರಡನೆಯದು, ತಾವೇ ಹೇಳುತ್ತಿರುವಂತೆ ಸರ್ವೋಚ್ಚನ್ಯಾಯಾಲಯದ ಮುಖ್ಯನ್ಯಾಯಾಧೀಶರಿಗೆ ಮತ್ತು ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಲು ನೇರವಾಗಿ ಕರ್ನಾಟಕ ರಾಜ್ಯದಿಂದ ನಿಯೋಗ ಹೋಗೋಣ. ತಾವು ತೀರ್ಮಾನ ಮಾಡಿ. ನಾವು ಹೋಗಿ ಒತ್ತಡ ಹಾಕುತ್ತಿದ್ದೇವೆಂದು ಅನ್ನಿಸಿದರೆ, ಕೇಂದ್ರ ಸರ್ಕಾರದವರಿಗೆ ಮತ್ತು ಸರ್ವೋಚ್ಚ ನ್ಯಾಯಾಲಯದವರಿಗೂ ಕೂಡ ಅನಿಸುತ್ತದೆ. ಕರ್ನಾಟಕ ರಾಜ್ಯದಲ್ಲಿ ಇಷ್ಟೊಂದು ಒತ್ತಡ ಇದೆ, ತಾವು 4-5 ಪತ್ರ ಬರೆದಿದ್ದೀರಿ. ಬರೀ ಪತ್ರಗಳು ಬರುತ್ತವೆಂದು ಅವರಿಗೂ ಕೂಡ ತಾತ್ಸಾರ ಇರಬಹುದು. ಒಂದು ನಿಯೋಗ ಹೋಗುತ್ತೇವೆಂದು ಅವರಿಗೂ ಆಶ್ವಾಸನೆ ಕೊಟ್ಟು, ಈ ಸದನದ ಮುಖಾಂತರ ಹೇಳಿದರೆ, ಖಂಡಿತ ಅವರು ಉಪವಾಸವನ್ನು ವಾಪಸ್ ತೆಗೆದುಕೊಳ್ಳಬಹುದು. ಎರಡು ಜೀವವನ್ನೂ ಉಳಿಸಬಹುದು. ದಯವಿಟ್ಟು ಈ ದಿಕ್ಕಿನಲ್ಲಿ ಸರ್ಕಾರ ಪ್ರಯತ್ನ ಮಾಡಬಹುದೇ ಎಂದು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಕಾನೂನು ಸಚಿವರು ಚೀಫ್ ಜಸ್ಟಿಸ್ ಜೊತೆ ಸ್ವತಃ ಹೋಗಿ ಮಾತನಾಡಿ, ಇದರ ಬಗ್ಗೆ ಕನ್‌ವಿನ್ಸ್ ಮಾಡುವುದನ್ನು ದಯವಿಟ್ಟು ಮಾಡಬೇಕು. ನೀವು ಪತ್ರ ವ್ಯವಹಾರ ಮಾಡಿದ್ದೀರಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆ ಏನೂ ತಕರಾರು ಇಲ್ಲ. ಆದರೆ, ಕೇವಲ ಪತ್ರವ್ಯವಹಾರ ಮಾಡಿದರೆ ನಡೆಯುವುದಿಲ್ಲ. ದಯವಿಟ್ಟು ಸರ್ಕಾರದ ಕಡೆಯಿಂದ ಒಂದು ನಿಯೋಗ ಹೋಗಿ, ಅವರಿಗೆ ಕನ್‌ವಿನ್ಸ್ ಮಾಡುವಂತಾದ್ದು ಮತ್ತು ಇವತ್ತು ಅಲ್ಲಿನ ಪರಿಸ್ಥಿತಿ ಏನಿದೆ ಎಂಬುದನ್ನು ತಿಳಿಸಿದರೆ, ಅವರೂ ಇದಕ್ಕೆ ಒಪ್ಪಿಕೊಳ್ಳಬಹುದು. ಏಕೆಂದರೆ, ತಾವು ಎಲ್ಲಾ ಹೇಳಿದ್ದೀರಿ. ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಡುವುದಕ್ಕೆ ತಯಾರಿದ್ದೇವೆಂದು ತಾವು ಹೇಳಿರುವಾಗ, ಅವರು ಒಪ್ಪಲಿಕ್ಕೆ ತಯಾರಿದ್ದೇ ಇರುತ್ತಾರೆ. ಅವರನ್ನು ಮುಖತಃ ಭೇಟಿಯಾದರೆ, ಇದು ಬಹಳ ಚಲೋ ಆಗುತ್ತದೆ. ಅದರ ಬಗ್ಗೆ ಒಂದು ಭರವಸೆ ಕೊಟ್ಟರೆ, ಬಹುಶಃ ಅವರು ಉಪವಾಸ ಹಿಂದೆ ತೆಗೆದುಕೊಳ್ಳುತ್ತಾರೆಂದು ನನ್ನ ನಂಬಿಕೆ ಇದೆ. ಇದುವರೆಗೂ ಅವರು ನಂಬುತ್ತಾ ಇಲ್ಲ, ಏಕೆಂದರೆ, ನೀವು 4 ವರ್ಷಗಳಿಂದ ಪತ್ರ ವ್ಯವಹಾರ ಮಾಡಿಕೊಂಡು ಬಂದಿದ್ದೀರಿ.

ಛೇರ್ಮನ್ : ನೀವು ಹೇಳಿದಿರಿ, ಅವರು ಹೋಗಿ ಒತ್ತಾಯ ಮಾಡಬೇಕು ತಾನೆ.

ಶ್ರೀ ಜಗದೀಶ್ ಶೆಟ್ಟರ್ : ಒತ್ತಡ ಬರುವಂಥ ಕೆಲಸ ಸರ್ಕಾರದಿಂದ ಆಗಿಲ್ಲ. ಸ್ವತಃ ಹೋಗಿ, ಭೇಟಿ ಮಾಡುವ ಕೆಲಸ ಆಗಿಲ್ಲ. ಅದಕ್ಕಾಗಿ, ಇವತ್ತು ಸರ್ಕಾರದ ಕಡೆಯಿಂದ ಒಂದು ನಿಯೋಗ ಹೋಗಬೇಕು.

ಛೇರ್ಮನ್ : ಈಗಾಗಲೇ ಹೇಳಿದ್ದೀರಿ, ಸಾಕು. ಮಾನ್ಯಮಂತ್ರಿಗಳು ಸವಿಸ್ತಾರವಾಗಿ ಹೇಳಿದ್ದಾರೆ.

ನೀವೂ ಕೂಡ ಸರ್ಕಾರಕ್ಕೆ ಒತ್ತಾಯ ಮಾಡಿದ್ದೀರಿ, ಇನ್ನೆಷ್ಟು ಒತ್ತಾಯ ಮಾಡುತ್ತೀರಿ. ಅವರನ್ನು ಭೇಟಿಯಾಗುವುದಕ್ಕೆ ಹೇಳೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಸರ್ಕಾರದ ಪ್ರಯತ್ನವನ್ನು ನಾವು ಸ್ವಾಗತಿಸುತ್ತೇವೆ. ಮಾನ್ಯ ಸಂಸದೀಯ ಸಚಿವರು ಮತ್ತು ಮುಖ್ಯಮಂತ್ರಿಗಳು ಹೈಕೋರ್ಟ್‌ಪೀಠ ಬರುವ ಬಗ್ಗೆ ಏನೇನು ಪ್ರಯತ್ನ ಪಟ್ಟಿದ್ದಾರೆ, ಆ ಎಲ್ಲಾ ವಿಚಾರವನ್ನು ಈ ಸದನದ ಮುಂದೆ ಮಂಡಿಸಿದ್ದಾರೆ. ನಾವು ಅದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇವೆ. ಅವರೇ ಹೇಳಿದ ಪ್ರಕಾರ ಪ್ರಧಾನಿಯವರನ್ನು ಭೇಟಿ ಮಾಡಬೇಕು, ಅಲ್ಲಿಂದ ನ್ಯಾಯಾಂಗ ಸಚಿವರನ್ನು ಭೇಟಿ ಮಾಡಬೇಕು. ಇಲ್ಲಿನ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡಬೇಕು, ಮತ್ತು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡಬೇಕೆಂದು ಏನು ಹೇಳಿದ್ದಾರೆ. ಈ ಭೇಟಿಯ ಕಾಲವನ್ನು ನಿಧಾನ ಮಾಡಬಾರದು. ಬಹಳ ಬೇಗ ಭೇಟಿ ಮಾಡತಕ್ಕಂತಾದ್ದು ಒಂದು. ಈ ಉಚ್ಚ ನ್ಯಾಯಾಲಯದವರು ಇದರ ಬಗ್ಗೆ ಶಿಫಾರಸ್ ಮಾಡದೇ ಇರತಕ್ಕಂತಾದ್ದಕ್ಕೆ ಕಾರಣ ಏನು ? ಏಕೆಂದರೆ, ಅಲ್ಲಿ ಈ ವಿಚಾರ ಬೆಂಕಿಯಾಗಿ ಉರಿಯುತ್ತಿರುವಾಗ, ಇಲ್ಲಿ ಸುಮ್ಮನೆ ಕುಳಿತು ಕೊಳ್ಳುವುದಕ್ಕಾಗುವುದಿಲ್ಲ. ಮತ್ತು ಸರ್ವಪಕ್ಷಗಳ ನಿಯೋಗ ಹೋಗುವುದಕ್ಕೆ ನಾವೆಲ್ಲರೂ ತಯಾರಾಗಿದ್ದೇವೆ. ಮತ್ತು ಈ ಸದನ ಈ ಬಗ್ಗೆ ಒಮ್ಮತದಿಂದ ಇರುವ ದೃಷ್ಟಿಯಿಂದ, ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಿ, ಅವರನ್ನು ಭೇಟಿ ಮಾಡಲಿಕ್ಕೆ, ಮತ್ತು ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡುವುದಕ್ಕೆ, ನಿಯೋಗ ಹೋಗುವುದನ್ನು ಇಲ್ಲಿ ತಾವು ಪ್ರಕಟಿಸಿದರೆ, ಬಹುಶಃ ಅಲ್ಲಿ ನಿರಶನ ಅಂತ್ಯವಾಗುತ್ತದೆಂದು ನಾನು ಅಂದುಕೊಂಡಿದ್ದೇನೆ. ಆ ನಿರಶನವನ್ನು ಅವರು ಅಂತ್ಯ ಮಾಡಲಿ. ಏಕೆಂದರೆ, ಇದನ್ನು ಬೆಳೆಸುವುದು ಒಳ್ಳೆಯದಲ್ಲ. ಈ ಸದನದಲ್ಲಿ ನಾವೆಲ್ಲರೂ ಈ ವಿಚಾರದಲ್ಲಿ ಪಕ್ಷಾತೀತವಾಗಿದ್ದೇವೆ. ಇದರ ಬಗ್ಗೆ ಮಾನ್ಯಮುಖ್ಯಮಂತ್ರಿಗಳು ಸರ್ವಪಕ್ಷಗಳ ನಿಯೋಗ ಹೋಗುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಡಲಿ ಎಂದು ಅವರನ್ನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಚಂದ್ರಕಾಂತ ಬೆಲ್ಲದ್ : ಮಾನ್ಯ ಜಗದೀಶ ಶೆಟ್ಟರ್‌ರವರು, ಅವರಿಗೆ ಕನ್‌ವಿನ್ಸ್ ಮಾಡಲಿಲ್ಲ ಕೇಳಲಿಲ್ಲ ಎನ್ನುವ ಮಾತನ್ನು ಹೇಳಿದರು.

ಶ್ರೀ ಕೆ.ಎಸ್. ಈಶ್ವರಪ್ಪ : ಅಲ್ಲಿ ಉಪವಾಸ ಕುಳಿತಿರುವವರಿಗೆ ಸಮಾಧಾನವಾಗಬೇಕಾಗಿದೆ, ಅದಕ್ಕಾಗಿ ಅವರು ಹೇಳಿರುತ್ತಾರೆ.

ಶ್ರೀ ಚಂದ್ರಕಾಂತ ಬೆಲ್ಲದ್ : ನಾನು ಕೂಡ ಉಪವಾಸ ಕುಳಿತಿರುವವರ ಸಲುವಾಗಿಯೇ ಹೇಳುವುದಕ್ಕೆ ಹೊರಟಿದ್ದೇನೆ. ಆ ಉಪವಾಸ ಕುಳಿತಿರುವವರೇ ನನ್ನ ಹತ್ತಿರ ಬಂದಿದ್ದರು. ಹೈಕೋರ್ಟ್ ಪೀಠದ ಬಗ್ಗೆ ಉಪವಾಸ ಕುಳಿತುಕೊಳ್ಳುತ್ತೇವೆಂದು ಹೇಳಿದರು. ಕಡೆಗೆ, ನನ್ನ ಮುಖಂಡತ್ವದಲ್ಲಿ ವಕೀಲರ ನಿಯೋಗವನ್ನು ಕರೆದುಕೊಂಡು ಹೋಗಿ, ಮಾನ್ಯ ಕಾನೂನು ಸಚಿವರಾದ ನಾಣಯ್ಯನವರ ಚೇಂಬರಿನಲ್ಲಿ ಕುಳಿತುಕೊಂಡು, ಎಲ್ಲರೂ ಮಾತನಾಡಿ, ಚರ್ಚೆ ಮಾಡಿದ್ದೇವೆ. ಸರ್ಕಾರ ಏನೇನು ಮಾಡಿದೆ ಎಂಬ ಕಲ್ಪನೆಯನ್ನು ಅವರಿಗೆ ಕೊಟ್ಟೆವು, ಅವರಿಗೂ ಗೊತ್ತಿದೆ. ಆದರೆ, ಇದು ಹೈಕೋರ್ಟ್ ಕೊಡದ ಹೊರತು

ನಮ್ಮ ಕಡೆಯಿಂದ ಆಗುವುದಿಲ್ಲವೆಂದು ಹೇಳಿ, ದಯವಿಟ್ಟು ತಾವು ನಿರಶನ ಕುಳಿತುಕೊಳ್ಳಬೇಡಿ, ನಾವು ಪ್ರಯತ್ನ ಮಾಡುತ್ತಿದ್ದೇವೆ, ಮುಖ್ಯಮಂತ್ರಿಗಳೂ ಭೇಟಿ ಮಾಡುತ್ತಾರೆಂದು 8ನೇ ತಾರೀಖಿ ಸಹಿತ ಹೇಳಿದೆ. ಆ ಕಾರಣದಿಂದ ನಾವು ಭೇಟಿ ಮಾಡಿ, ಆ ಪ್ರಯತ್ನ ಮಾಡುತ್ತೇವೆ. ದಯವಿಟ್ಟು ನೀವು ನಿರಶನ ಕೂಡಬೇಡಿ ಎಂದು ಅವರಿಗೆ ಹೇಳಿದೆವು. ಆದರೂ ಕೂಡ ಅವರಿಗೆ ಕನ್‌ವಿನ್ಸ್ ಆಗಲಿಲ್ಲ. ನಾವು ಕೂಡುವುದಕ್ಕೆ ನಿರ್ಣಯ ಮಾಡಿದ್ದೇವೆ. ಕೂಡುತ್ತೇವೆಂದು ಹೇಳಿದರು.

ಶ್ರೀ ಎಂ. ಸಿ. ನಾಣಯ್ಯ : ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡುವ ಕಾರ್ಯಕ್ರಮವೂ ಇದೆ. ನಾವು ಆ ಕಾರ್ಯಕ್ರಮವನ್ನು ಮೊದಲು ಮುಗಿಸುತ್ತೇವೆ. ಅನಂತರ ನಿಮ್ಮ ವಿಷಯ ಎರಡನೆಯದು. ಬಹುಶಃ ಅಲ್ಲಿಯವರೆಗೆ ನಮಗೆ ಸಮಯ ಕೊಡಿ, ನಾವು ಕೆಲಸ ಮಾಡುತ್ತೇವೆ ಇದು ಒಂದು ವಾರ ಅಥವಾ ಹತ್ತು ದಿವಸದಲ್ಲಿ ಆಗುವ ಕೆಲಸವಲ್ಲ. ನಮಗೂ, ನಿಮಗೂ ಗೊತ್ತಿದೆ. ಈ ಮೆಸೇಜನ್ನು ನಾವು ಮೊನ್ನೆ ಹೇಳಿದೆವು. ಮತ್ತು ಆ ಹಿರೇಮಠ ಯಾರಿದ್ದಾರೆ. ಅವರು ಕೂಡುವುದಕ್ಕೆ ಒಂದು ದಿವಸ ಮುಂಚೆ ಅವರ ಜೊತೆಯಲ್ಲಿ ನಾನು ಮುಕ್ಕಾಲು ಗಂಟೆ ಮಾತನಾಡಿದ್ದೇನೆ. ಅವರು ನಮ್ಮ ಮನೆಗೇ ಬಂದಿದ್ದರು. ನಾನು ಇದನ್ನು ಪೂರ್ತಿ ಹೇಳಿದೆ. ದಯವಿಟ್ಟು ಈ ಕೆಲಸ ಮಾಡಬೇಡಿ, ನಮ್ಮ ಪಾರ್ಟಿಯ ಒಬ್ಬ ಖಜಾಂಚಿಯವರು, ಅವರು ಯಾರೇ ಇರಲಿ, ನಮ್ಮ ಮನೆಗೆ ಬಂದಾಗ ಇರತಕ್ಕ ಪೂರ್ತಿ ವಿಚಾರ ಹೇಳಿದ್ದೇನೆ. ಧಾರವಾಡಕ್ಕೆ ಹೋದಾಗ ಒಂದು ಗಂಟೆ ಅವರ ಜೊತೆಯಲ್ಲಿ ಮಾತನಾಡಿದ್ದೇನೆ. ಮೊನ್ನ ಬಂದಾಗ ಹೇಳಿದ್ದೇನೆ. ದಯವಿಟ್ಟು ಆಮರಣ ಉಪವಾಸ ಕುಳಿತರೆ, ಅದಕ್ಕೆ ಪರಿಹಾರ ಸಿಗುತ್ತದೆಯೇ ? ಪರಿಹಾರ ಹುಡುವುದಕ್ಕೆ ನಾವು ಪ್ರಯತ್ನ ಮಾಡೋಣ. ಈ ತರಹ ಮಾಡಬೇಡಿ ಎಂದು ನಾನು ಮತ್ತು ಇವರು ಇಬ್ಬರೂ ಹೇಳಿದ್ದೇವೆ. ಈಗ ನಮ್ಮ ಪ್ರಯತ್ನವನ್ನು ನಾವು ಮುಂದುವರೆಸುತ್ತಾ ಇದ್ದೇವೆ. ಅವರನ್ನು ಭೇಟಿ ಮಾಡತಕ್ಕ ಒಂದು ಕಾರ್ಯಕ್ರಮ ಇದೆ. ಆ ಕಾರ್ಯಕ್ರಮಕ್ಕೆ ನಾವು ದಿನ ನಿಗದಿ ಮಾಡಿ ಆ ಕೆಲಸವನ್ನೂ ಮಾಡುತ್ತೇವೆ. ಆದಾದ ಮೇಲೆ ಮುಂದಿನ ಹೆಜ್ಜೆಯನ್ನು ಹಂತ ಹಂತವಾಗಿ ಮಾಡಿಕೊಂಡು ಹೋಗುತ್ತೇವೆ. ಆ ಸಂದರ್ಭದಲ್ಲಿ ನಿಮಗೆ ತಿಳುವಳಿಕೆಯನ್ನೂ ಕೂಡ ಕೊಡುತ್ತೇವೆ. ಆದ್ದರಿಂದ, ಇಷ್ಟೆಲ್ಲಾ ಮಾಡುತ್ತಿರುವಾಗ ನಮ್ಮ ಮಿತ್ರರು ಯಾರಿದ್ದಾರೆ, ಶ್ರೀಮಾನ್ ಹಿರೇಮಠರವರು ಮತ್ತು ಶ್ರೀಮತಿ ಕುಲಕರ್ಣಿಯವರು ದಯವಿಟ್ಟು ಅವರು ಆಮರಣ ಮುಷ್ಕರವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ನಮ್ಮ ಜೊತೆಗೆ ಸಹಕಾರ ನೀಡಲಿ. ನಾವು ಎಲ್ಲಾ ಕೆಲಸವನ್ನು ಮಾಡಲಿಕ್ಕೆ ತಯಾರಾಗಿದ್ದೇವೆ.

ಒಬ್ಬ ಸದಸ್ಯರು : ಯಾರಾದರೊಬ್ಬರು ಮಂತ್ರಿಯವರು ಅಲ್ಲಿಗೆ ಹೋಗಿ, ಅವರನ್ನು ಭೇಟಿ ಮಾಡಿ ಹೇಳಿದರೆ ಒಳ್ಳೆಯದು.

ಶ್ರೀ ಎಸ್. ಎಸ್. ಪಾಟೀಲ್ : ನಾನು ಹೋಗುತ್ತೇನೆ.

ಛೇರ್ಮನ್ : ನಾಳೆ ಮಂತ್ರಿಗಳು ಹೋಗುತ್ತಾರೆಂದು ಹೇಳಿದ್ದಾರೆ, ಸಾಕು ಬಿಡಿ.

ಶ್ರೀ ಎಸ್. ಎಸ್. ಪಾಟೀಲ್ : ನಾನು ಎಂ. ಎಸ್. ಪಾಟೀಲರು ಮತ್ತು ಮಿರಾಜುದ್ದೀನ್ ಪಟೇಲರು ಹೋಗುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ್ : ಮಾನ್ಯ ಅಧ್ಯಕ್ಷರೇ, ಮುಧೋಳದಲ್ಲಿ ಜೆ. ಎಂ. ಎಫ್. ಸಿ. ಕೋರ್ಟ್ ಇದೆ. ಅದು 1870ನೇ ಇಸವಿಯಲ್ಲಿ ಕಟ್ಟಿರತಕ್ಕಂಥ ಕೋರ್ಟ್. ಅದು ಈಗಾಗಲೇ ಬಿದ್ದು ಹೋಗುವಂತಹ ಪರಿಸ್ಥಿತಿಯಲ್ಲಿದೆ. ಮಳೆಗಾಲದಲ್ಲಿ ಮಳೆ ಬಂದರೆ ಅಲ್ಲಿ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಆಗುತ್ತಿಲ್ಲ. ಮಳೆಗಾಲದಲ್ಲಿ ಛತ್ರಿ ಹಿಡಿದು ಕೆಲಸ ಮಾಡುವಂತಹ ಪ್ರಸಂಗ ಬಂತು. ಜಿಲ್ಲಾ ನ್ಯಾಯಾಧೀಶರು ಮುಧೋಳಕ್ಕೆ ಬಂದು ನೋಡಿ ಸರ್ಕಾರಕ್ಕೆ ಮತ್ತು ಹೈಕೋರ್ಟಿಗೆ ವರದಿಯನ್ನು ಕೊಟ್ಟರು. ಆ ಕಟ್ಟಡ ಯಾವುದೇ ಸಮಯದಲ್ಲಿ ಬೀಳಬಹುದು. ಅಲ್ಲಿರತಕ್ಕಂಥಾ ನ್ಯಾಯಾಧೀಶರು ಸಾಯಬಹುದು ವಕೀಲರು ಸಾಯಬಹುದು, ಕಕ್ಷಿದಾರರು ಸಾಯಬಹುದು ಎನ್ನುವಂತಹ ಒಂದು ವರದಿಯನ್ನು ಕಳುಹಿಸಿಕೊಟ್ಟರು. ಆದರೂ ಕೂಡ ಅದು ಪ್ರಯೋಜನವಾಗಲಿಲ್ಲ. ಕಡೆಗೆ ನಾನು ಲೋಕೋಪಯೋಗಿ ಸಚಿವರನ್ನು ವಿನಂತಿ ಮಾಡಿಕೊಂಡೆ. ಈ ವರ್ಷದ ಬಜೆಟ್‌ನಲ್ಲಿ ಅಲ್ಲಿ ಒಂದು ಹೊಸ ಕಟ್ಟಡವನ್ನು ಕಟ್ಟಲು ಸೇರಿಸಬೇಕೆಂದು. ದಿನಾಂಕ 16-3-99ರಂದು ಮಾನ್ಯ ಲೋಕೋಪಯೋಗಿ ಕಾರ್ಯದರ್ಶಿಗಳ ಕಛೇರಿಯಲ್ಲಿ ಒಂದು ಸಭೆ ನಡೆಯಿತು. ಈ ವರ್ಷದ 1999 ಮತ್ತು ಎರಡು ಸಾವಿರ ಇಸವಿಯಲ್ಲಿ ಯಾವ ಯಾವ ಹೊಸ ಕೆಲಸಗಳನ್ನು ಬಜೆಟ್‌ನಲ್ಲಿ ಸೇರಿಸಬೇಕೆನ್ನುವ ಬಗ್ಗೆ. ಸೌತ್ ಜೋನ್‌ನಲ್ಲಿ ರಾಮನಗರ. ನಾರ್ತ್ ಜೋನ್‌ನಲ್ಲಿ ಮುಧೋಳವನ್ನು ಸೇರಿಸಬೇಕೆಂದು ತೀರ್ಮಾನ ಆಯಿತು. ನಾನು ಸಂಬಂಧಪಟ್ಟ ಕಾರ್ಯದರ್ಶಿಗಳನ್ನು, ಉಪ ಕಾರ್ಯದರ್ಶಿಗಳನ್ನು ಮತ್ತು ಅಧೀನ ಕಾರ್ಯದರ್ಶಿಗಳನ್ನು ಸಹ ಭೇಟಿ ಮಾಡಿದೆ. ಆಗ ಅವರು ಹೇಳಿದರು ಅಪೆಂಡಿಕ್ಸ್ ಸಿ ಪ್ರಿಂಟ್ ಆಗಿ ಬರುತ್ತದೆ. ಒಂದು ವಾರದ ನಂತರ ನೀವು ಕಾಪಿ ತೆಗೆದುಕೊಳ್ಳಿ ಎಂದು ಹೇಳಿದರು. ಅಪೆಂಡಿಕ್ಸ್ ಸಿ ಪ್ರಿಂಟ್ ಆಗಿ ಬಂದಾಗ ನೋಡಿದರೆ ಮುಧೋಳ್ ಕೈ ಬಿಟ್ಟು ಬೇರೆ ಊರು ಅದರಲ್ಲಿ ಸೇರಿದೆ. ಒಂದು ಸಾರಿ ಸಭೆ ಸೇರಿ ತೀರ್ಮಾನ ಮಾಡಿದ ಮೇಲೆ ಅದನ್ನು ಕೈ ಬಿಡುವಂತಾದ್ದು ಯಾರು ಮಾಡಿದರು ? ಏಕೆ ಮಾಡಿದರು ? ಎನ್ನುವ ಬಗ್ಗೆ ನಾನು ಸರ್ಕಾರದ ಗಮನ ಸೆಳೆಯಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ ಒಂದು ವಿಷಯವನ್ನು ನಾನು ಬಹಳ ನೋವಿನಿಂದ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಸ್ವಾತಂತ್ರ್ಯ ಬಂದು 50 ವರ್ಷಗಳು ಆಯಿತು. 50 ವರ್ಷಗಳಿಂದ ಉತ್ತರ ಕರ್ನಾಟಕ ಯಾವುದೇ ಒಂದು ಅಭಿವೃದ್ಧಿ ಕೆಲಸ ಬಂದರೂ ಬೆಂಗಳೂರಿನಲ್ಲಿ ಕೆಲಸ ಮಾಡತಕ್ಕಂಥವರು ಅದನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಆ ಭಾಗಕ್ಕೆ ಕೊಡಬೇಕಾದ ಅಭಿವೃದ್ಧಿ ಹಣವನ್ನು ಕೊಡುವುದಿಲ್ಲ. ಇದೇ ರೀತಿಯ ಒಂದು ಪ್ರವೃತ್ತಿ ಮುಂದುವರಿಯುವುದಾದರೆ ನಾವು ಇನ್ನು ಮುಂದೆ ಇವರ ಹತ್ತಿರ ಕೆಲಸ ಕೇಳುವುದಿಲ್ಲ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಮಾಡಿ ಎನ್ನುವ ಬಗ್ಗೆ ಹೋರಾಟ ಮಾಡಬೇಕಾಗುತ್ತದೆ. ಇವತ್ತಿನಿಂದಲೇ ನಾನು ಈ ಸದನದ ಮೂಲಕ ಆ ಕೆಲಸವನ್ನು ಮಾಡುತ್ತೇವೆ. ಎಷ್ಟು ದಿವಸ ಇದೇ ರೀತಿಯ ತಾರತಮ್ಯ ನಡೆಯುವುದು ? ಮಾನ್ಯ ಸಚಿವರು ಹೇಳಲಿ. ಮಾನ್ಯ ಸಚಿವರ ಬಗ್ಗೆ ನನ್ನದೇನೂ ಅಭ್ಯಂತರವಿಲ್ಲ.

ಛೇರ್ಮನ್ : ತಾವು ಪ್ರಶ್ನೆ ಕೇಳಿದ್ದೀರಿ ಅದಕ್ಕೆ ಮೊದಲು ಉತ್ತರ ತೆಗೆದುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ್ : ನಾವು ತೀವ್ರತರವಾದ ಹೋರಾಟಕ್ಕೆ ಮುಂದಾಗುತ್ತೇವೆ

ಎನ್ನುವಂತಹ ಎಚ್ಚರಿಕೆಯನ್ನು ನಾನು ಸರ್ಕಾರಕ್ಕೆ ಇವತ್ತು ಕೊಡಬೇಕಾಗುತ್ತದೆ.

ಛೇರ್ಮನ್ : ಈಗ ಮಾನ್ಯ ಸದಸ್ಯರು ಎತ್ತಿದ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಲ್ಲ.

ಶ್ರೀ ಪ್ರಹ್ಲಾದ್ ಹನುಮಂತಪ್ಪ ಪೂಜಾರ್ : ಮಾನ್ಯ ಅಧ್ಯಕ್ಷರೇ, ಮುಧೋಳ ನ್ಯಾಯಾಲಯ ತುಂಬಾ ಶಿಥಿಲಗೊಂಡಿದ್ದು ಆ ಕಟ್ಟಡವನ್ನು ದುರಸ್ತಿ ಮಾಡಬೇಕು. ಆ ನ್ಯಾಯಾಲಯದಲ್ಲಿ ಕೆಲಸ ಮಾಡುವ ನೌಕರರಿಗೆ, ನ್ಯಾಯಾಧೀಶರಿಗೆ, ಮತ್ತು ವಕೀಲರಿಗೆ ಹಾಗೂ ಕಕ್ಷಿದಾರರಿಗೆ ರಕ್ಷಣೆ ಕೊಡುವ ಬಗ್ಗೆ ಒಂದು ಹೋರಾಟ ಸಹ ನಡೆದಿತ್ತು. ಆದರೆ ಇವತ್ತಿನವರೆಗೂ ಸಹ ಸರ್ಕಾರ ಅದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನಾನು ಒಂದು ವಿಚಾರವನ್ನು ಸರ್ಕಾರದ ಮುಂದೆ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಇವತ್ತು ಏನು ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡುವ ಬಗ್ಗೆ ಹುಬ್ಬಳ್ಳಿ ಧಾರವಾಡದಲ್ಲಿ ಅಮರಣಾಂತ ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ ಇದು ಮೊದಲನೇ ಸಲ ಕುಳಿತಿದ್ದು ಅಲ್ಲ, ಈಗಾಗಲೇ ಅವರು ಎರಡು ಮೂರು ಸಲ ಹೋರಾಟ ಮಾಡಿದ್ದಾರೆ. ಇವತ್ತು ಕೊನೆಯ ಅಸ್ತ್ರವಾಗಿ ಅವರು ಅಮರಣಾಂತ ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ. ಈಗಾಗಲೇ ಬಾಗಲಕೋಟೆ, ಗದಗ್ ಹಾವೇರಿ ಇಲ್ಲಿ ಜಿಲ್ಲಾ ನ್ಯಾಯಾಲಯಗಳನ್ನು ಮಾಡಿ ಕೊಡಬೇಕೆನ್ನುವ ಬಗ್ಗೆ ಹೋರಾಟ ಮಾಡಿದ್ದೇವೆ. ಈಗ ಅಲ್ಲಿ ನ್ಯಾಯಾಲಯದ ಕಟ್ಟಡ ಇದ್ದರೂ ಕೂಡ ಅದಕ್ಕೆ ಪರ್ಮಿಶನ್ ಕೊಡುವಂತಹ ಒಂದು ಕೆಲಸವನ್ನು ಸರ್ಕಾರ ಮಾಡಿಲ್ಲ. ನ್ಯಾಯಾಧೀಶರ ಬಗ್ಗೆ ನ್ಯಾಯಾಲಯಗಳ ಬಗ್ಗೆ ನ್ಯಾಯದಾನದ ದೃಷ್ಟಿಯಲ್ಲಿ ಈ ಸರ್ಕಾರ ವಿಶೇಷವಾದ ಕಳಕಳಿಯನ್ನು ಹೊಂದಿಲ್ಲವೆಂದು ನಾನು ಪ್ರತಿಭಟನೆಯನ್ನು ಮಾಡಬೇಕಾಗಿದೆ. ಆದ್ದರಿಂದ ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡುತ್ತೇನೆ ಸರ್ಕಾರ ತೀವ್ರವಾಗಿ ಕೆಲಸಮಾಡಿ ಹುಬ್ಬಳ್ಳಿಯಲ್ಲಿ ಒಂದು ಹೈಕೋರ್ಟ್ ಪೀಠ ಸ್ಥಾಪನೆ ಮಾಡಬೇಕು. ಮತ್ತು ಉತ್ತರ ಕರ್ನಾಟಕದ ಭಾಗದಲ್ಲಿ ನ್ಯಾಯಾಲಯಗಳು ಎಲ್ಲೆಲ್ಲಿ ದುಸ್ಥಿತಿಯಲ್ಲಿವೆ ಅವುಗಳನ್ನು ಸರಿಪಡಿಸಬೇಕು. ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೇ, ಮುಧೋಳ್ ನಗರದಲ್ಲಿ ನ್ಯಾಯಾಲಯದ ಕಟ್ಟಡ ಸುಮಾರು 123 ವರ್ಷಗಳಷ್ಟು ಹಳೆಯದಾದ ಕಟ್ಟಡ ಇತ್ತು ನಿಜ. ಇದರ ಜೊತೆಗೆ ಆ ಕಟ್ಟಡ ಅತ್ಯಂತ ಶಿಥಿಲಗೊಂಡಿದ್ದು ನಿಜ. ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದ್ದು ಆ ಬಗ್ಗೆ ಸರ್ಕಾರ ಒಂದು ನೀಲಿ ನಕ್ಷೆಯನ್ನು ತರಿಸಿ 1999 ಮತ್ತು ಎರಡು ಸಾವಿರ ಇಸವಿಯ ಆಯವ್ಯಯದಲ್ಲಿ ಸೇರಿಸುವ ಒಂದು ಕಾರ್ಯಕ್ರಮವನ್ನು ಈಗಾಗಲೇ ಹಾಕಿಕೊಂಡಿದ್ದೇವೆ. ಈ ವರ್ಷ ಆಯವ್ಯಯದಲ್ಲಿ ಸೇರಿಸಿ ಕಟ್ಟಡವನ್ನು ಕಟ್ಟುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

ಛೇರ್ಮನ್ : ಮಾನ್ಯ ಸಚಿವರುಗಳಲ್ಲಿ ವಿಜ್ಞಾಪನೆ. ಅನೇಕರು ಚೀಟಿ ಕಳುಹಿಸುತ್ತಿದ್ದಾರೆ. ನಾವು ವಿಷಯಗಳನ್ನು ಪ್ರಸ್ತಾಪ ಮಾಡುವವರಿದ್ದೇವೆ ಮಂತ್ರಿಗಳು ಹೊರಟು ಹೋಗಿಬಿಡುತ್ತಾರೆಂದು ಕೊನೆಯ ದಿವಸ ದಯವಿಟ್ಟು ಮಂತ್ರಿಗಳು ಯಾರೂ ಹೋಗಬಾರದೆಂದು ನನ್ನ ವಿಜ್ಞಾಪನೆ.